ಓ.ಎಸ್. ನಂ. 278 /2016
ಪಿ ಡಬ್ಲ್ಯೂ -1

**<u>ಸಾಕ್ಷಿಯನ್ನು ದಿನಾಂಕ: 01-07-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಮುಂದುವರೆದ ಪಾಟೀಸವಾಲುಃ ಶ್ರೀ ಎಂ.ಎಲ್.ಎಸ್. ವಕೀಲರಿಂದ</u>**

**1.** ದಿಃ 07.03.1993 ರಲ್ಲಿ 1 ರಿಂದ 4 ನೇ ಪ್ರತಿವಾದಿ ಹಾಗೂ ಅವರ ತಂದೆ ಸೇರಿಕೊಂಡು ದಾವಾ ಸ.ನ. 97 ರ ಪೈಕಿ 2 ಎಕಡೆ 20 ಗುಂಟೆಯನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದ ಅಧಾರ ಮೇಲೆ 5 ನೇ ಪ್ರತಿವಾದಿಯ ಹೆಸರಿಗೆ ಎಂ. ಆರ್. ಸಂ. 7/1993-94 ರಂತೆ ಖಾತೆ ಆಗಿರುತ್ತದೆ ಎಂದರೆ ಸರಿಯಲ್ಲ. ದಿಃ 18.01.1981 ರ ಕ್ರಯ ಪತ್ರದ ಆಧಾರದ ಮೇಲೆ ಪ್ರತಿವಾದಿ 1 ರಿಂದ 4 ನೇ ರವರು ಅವರ ತಂದೆಯ ಹೆಸರಿಗೆ ಎಂ. ಆರ್. ಸಂ. 1/1993-94 ರಂತೆ ಖಾತೆ ಆಗಿರುತತದೆ ಎಂದರೆ ಸರಿಯಲ್ಲ. ಪ್ರಸ್ತುತ 1 ರಿಂದ 4 ನೇ ಪ್ರತಿವಾದಿಗಳ ಹೆಸರಿಗೆ ಖಾತೆ ಬಂದಿರುತ್ತೆ ಎಂದರೆ ಸರಿಯಲ್ಲ. ಸ.ನ. 97 ರ ಒಟ್ಟು ವಿಸ್ತೀರ್ಣದ 5 ಎಕರೆ ಪೈಕಿ 2 ಎಕರೆ 20 ಗುಂಟೆ ಪ್ರತಿವಾದಿ 1 ರಿಂದ 4 ರವರಿಗೆ ಸೇರಿದ್ದು ಹಾಗೂ ಉಳಿಕೆ 2 ಎಕರೆ 20 ಗುಂಟೆ 5 ನೇ ಪ್ರತಿವಾದಿಗೆ ಸೇರಿದ್ದು ಎಂದರೆ ಸರಿಯಲ್ಲ. ಸದರಿ ಸ.ನ. ನ ಆಖರಬು 1 ಎಕರೆ 30 ಗುಂಟೆ ಹಾಗೂ ಉಳಿಕೆ 30 ಗುಂಟೆಯಲ್ಲಿ ಪ್ರತಿವಾದಿ 1 ರಿಂದ 4 ರವರು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ.

ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಮಾಲೀಕತ್ವ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಪ್ರತಿವಾದಿ 1 ರಿಂದ 4 ರವರು ಹಕ್ಕುದಾರರು ಹಾಗೂ ಮಾಲೀಕರು ಆಗಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ನಾನು ಮಾಲೀಕಳು ಅಲ್ಲದೇ ಇರುವ ಕಾರಣ ಈ ದಾವೆಯಲ್ಲಿ ಕೇಳಿರುವ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ರಿಂದ 5 ನೇ ಪ್ರತಿವಾದಿ ಹೆಸರಿಗೆ ಆಗಿರುವ ಎಂ. ಆರ್ ಅನ್ನು ಪ್ರಶ್ನಿಸಿ ನಾನು ಎ.ಸಿ ನ್ಯಾಯಾಲಯಲ್ಲಿ RRT No. 138/2017 ಹಾಗೂ 139/2017 ರಂತೆ ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಮೇಲ್ಮನವಿಗಳು ವಜಾಗೊಂಡಿರುತ್ತವೆ ಎಂದರೆ ಸರಿಯಲ್ಲ, ಸಿವಿಲ್ ನ್ಯಾಯಾಲಯದಲ್ಲಿ ಇತ್ಯರ್ಥ ಪಡಿಸಿಕೊಳ್ಳುವಂತೆ ಮುಕ್ತಾಯ ಮಾಡಿರುತ್ತಾರೆ. ನಾನು ನನ್ನ ವೈಯಕ್ತಿಕ ದ್ವೇಷದಿಂದ ಪ್ರತಿವಾದಿಗಳ ವಿರುದ್ಧ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಓ.ಎಸ್. ನಂ. 278 /2016
ಪಿ ಡಬ್ಲ್ಯೂ -1

**5 ನೇ ಪ್ರತಿವಾದಿ ಪರ ವಕೀಲರು ಶ್ರೀ ಕೆ.ಬಿ.ಎ ರವರು 1 ರಿಂದ 4 ನೇ ಪ್ರತಿವಾದಿ ಪರ ವಕೀಲರು ಪಾಟೀಸವಾಲನ್ನು 5 ನೇ ಪ್ರತಿವಾದಿ ಪರ ಪಾಟೀಸವಾಲಾಗಿ ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.**

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಹಿ/-**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**